**24ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು**

**ಸಿ.ಸಿ.ನಂ.6992/2023**

**ಪ್ರಾ.ಸಾಃ 1 ಚಾ.ಸಾಃ 1**

| | |
|---|---|
| **ಸಾಕ್ಷಿದಾರರ ಹೆಸರು** | ಸುಹಾಸ್ |
| **ತಂದೆಯ/ಗಂಡನ ಹೆಸರು** | ಜಯಶಂಕರ್ |
| **ವಯಸ್ಸು** | 19 **ವರ್ಷ** |
| **ಉದ್ಯೋಗ** | ದ್ವಿತೀಯ ವರ್ಷದ ಪದವಿ ವಿದ್ಯಾರ್ಥಿ |
| **ವಿಳಾಸ** | ಚಾಮರಾಜಪೇಟೆ, **ಬೆಂಗಳೂರು.** |

**ದಿನಾಂಕ ಃ- 09.11.2023 ರಂದು ಸಾಕ್ಷಿಗೆ ಶಪಥ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅ.ಃ ರವರಿಂದ**

ನ್ಯಾಯಾಲಯದ ಮುಂದಿರುವ ಆರೋಪಿತರು ಯಾರೋ ಗೊತ್ತಿಲ್ಲ. ಅವರು ನನಗೆಯಾವುದೇ ರೀತಿ ಹಲ್ಲೆ ಮಾಡಿಲ್ಲ, ಅವ್ಯಾಚ ಶಬ್ದಗಳಿಂದ ಬೈದಿಲ್ಲ. ಈಗ್ಗೆ 10 ತಿಂಗಳ ಹಿಂದೆ ನಾನು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ತೆಗೆದುಕೊಂಡಿದ್ದು ಸದರಿ ಸಹಿಯು ಪಿರ್ಯಾದಿ ಮೇಲೆ ಇದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಎಪಿಪಿ ರವರಿಂದ ಃ**

ದಿ. 03.01.2023 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು

ಚಾಮರಾಜಪೇಟೆಯ ಆಜಾದ್ ನಗರದಲ್ಲಿದ್ದಾಗ ನ್ಯಾಯಾಲಯದ ಮುಂದೆ ಇರುವ 1 ರಿಂದ 3 ನೇ ಆರೋಪಿತರು ನನ್ನ ಬಳಿ ಬಂದು , ನನಗೆ ಅವ್ಯಾಚ ಶಬ್ದಗಳಿಂದ ಬೈದಿದ್ದು ಅದೇ ದಿನ ರಾತ್ರಿ 8.30 ರ ಸುಮಾರಿಗೆ ನಾನು 1 ನೇ ಕ್ರಾಸ್ ನ ಅನಂತರಾಮಯ್ಯ ಕಾಪೌಂಡ್ ಬಳಿ ಇದ್ದಾಗ ಪುನಃ ಆರೋಪಿತರು ಅಲ್ಲಿಗೆ ಬಂದು ಜಗಳ ತೆಗೆದು ನನಗೆ ಅವ್ಯಾಚ ಶಬ್ದಗಳಿಂದ ಬೈದು , 1 ನೇ ಆರೋಪಿ ಕೀ ಬಂಚ್ ನಲ್ಲಿದ್ದ ಚಾಕುವಿನಿಂದ ನನ್ನ ಎಡ-ಕೈಗೆ ಹೊಡೆದು ರಕ್ತಗಾಯ ಪಡಿಸಿದ್ದು 2 ಮತ್ತು 3 ನೇ ಆರೋಪಿತರು ಕೈಗಳಿಂದ ನನ್ನ ಮೈ-ಕೈಗೆ ಹಲ್ಲೆ ಮಾಡಿ ಅವ್ಯಾಚ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿಯಲ್ಲ. ಈ ಹಿನ್ನಲೆಯಲ್ಲಿ ನಾನು **ನಿಶಾನೆ ಪಿ-1** ರೀತ್ಯಾ ರ ಪಿರ್ಯಾದು ನೀಡಿರುತ್ತೇನೆಂದರೆ ಸರಿಯಲ್ಲ. **ನಿ.ಪಿ-1** ರ ಅಡಕಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇವೆಂದರೆ ಸರಿಯಲ್ಲ. ನಾನು ಮತ್ತು ಆರೋಪಿತರು ರಾಜಿಯಾಗಿದ್ದೇವೆಂದರೆ ಸರಿ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ- ಏನು ಇಲ್ಲ.**

**ಮರುವಿಚಾರಣೆ ಃ ಇಲ್ಲ.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

**ಓ.ಹೇ.ಕೇ.ಸ.ಇ.ಒ**

**24ನೇ ಅ.ಮು.ಮ.ದಂ.ನ್ಯಾ.**